## ಸಮರ್ಥನಂ ಟ್ರಸ್ಟ್‌ನಿಂದ ದೀಪಾವಳಿ ಸಂಭ್ರಮ

# ಕುಣಿದು ಕುಪ್ಪಳಿಸಿದ ವಿಶಿಷ್ಟಚೇತನರು

ದಿಗಂತ ಚಿತ್ರ




ನಗರದ ಮಂತ್ರಿಸ್ಕ್ವೇರ್‌ನಲ್ಲಿ ಶನಿವಾರ ಸಮರ್ಥನಂ ಟ್ರಸ್ಟ್‌ನ ಅಂಧ ಮತ್ತು ವಿಶಿಷ್ಟಚೇತನ ಮಕ್ಕಳಿಗಾಗಿ ಹಮ್ಮಿಕೊಂಡಿದ್ದ ಮಕ್ಕಳ ನೃತ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

▸ ದಿಗಂತ ವರದಿ: ಬೆಂಗಳೂರು, ಅ.8

ನಗರದ ಮಂತ್ರಿಸ್ಕ್ವೇರ್‌ನಲ್ಲಿ ಸಮರ್ಥನಂ ಟ್ರಸ್ಟ್ ವತಿಯಿಂದ ದೀಪಾವಳಿ ವಿಶೇಷತೆ ಅಂಗವಾಗಿ ಅಂಧ ಮತ್ತು ವಿಶಿಷ್ಟಚೇತನ ಮಕ್ಕಳಿಗಾಗಿ ಹಮ್ಮಿಕೊಂಡಿದ್ದ ಮಕ್ಕಳ ನೃತ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಭ್ರಮಿಸಿದರು.

ದೀಪಗಳ ಹಬ್ಬ ದೀಪಾವಳಿ. ಅಂತಹ ದೀಪ ಈ ಮಕ್ಕಳ ಜೀವನದ ಕತ್ತಲನ್ನು ಓಡಿಸಿ ಬೆಳಕನ್ನು ನೀಡುವ ವಿಶಿಷ್ಟ ಹಬ್ಬವಾಗಿದೆ. ದೀಪಾವಳಿ ಮಕ್ಕಳನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವಂತ ಶಕ್ತಿ ನೀಡುತ್ತದೆ. ಇದರಲ್ಲಿ ಸಮರ್ಥನಂ ಸಂಸ್ಥೆಯ 25 ಮಕ್ಕಳು ಬಹಳ ಉತ್ಸಾಹದಿಂದ ಭಾಗವಹಿಸಿ ಕುಣಿದು ಕುಪ್ಪಳಿಸಿದರು. ಮಾಲ್‌ಗೆ ಭೇಟಿ ನೀಡುವ ಸಾರ್ವಜನಿಕರಿಗೆ ನೃತ್ಯ ಪ್ರದರ್ಶಿಸಿ ಮನರಂಜನೆ ನೀಡಿದರು.

ಈ ಅಂಧ ಮಕ್ಕಳಿಗಾಗಿಯೇ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಆ ಮಕ್ಕಳಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ವಿನೂತನ ಕಾರ್ಯಕ್ರಮವನ್ನು ಮಂತ್ರಿಸ್ಕ್ವೇರ್ ಹಮ್ಮಿಕೊಂಡಿತ್ತು. ಈ ವಿಶೇಷ ಮಕ್ಕಳು ಮಾಲ್‌ನ ಪ್ರೇಕ್ಷಕರಿಗಾಗಿ ವಿಶೇಷವಾಗಿ ಸಂಯೋಜಿಸಿದ ನೃತ್ಯದ ಜೊತೆಗೆ ಎರಡು ಗೀತೆಗಳನ್ನು ಪ್ರಸ್ತುತಪಡಿಸಿದರು. ಸಮರ್ಥನಂ ಟ್ರಸ್ಟ್ ಹಲವು ವರ್ಷಗಳಿಂದ ಒಂದು ಲಾಭಯೇತರ ಸಂಸ್ಥೆಯಾಗಿ ವಿಶಿಷ್ಟಚೇತನ ಮಕ್ಕಳನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಮುನ್ನಡೆಸಲು ಕಾರ್ಯನಿರ್ವಹಿಸುತ್ತಿದೆ. ಮಾಲ್‌ನ ಮುಖ್ಯಸ್ಥ ನಿತಿನ್ ಬಿರ್ ಹಾಗೂ ಮಾಲ್‌ನ ಸಿಬ್ಬಂದಿ ಹಾಗೂ ಮಕ್ಕಳು ಭಾಗವಹಿಸಿದ್ದರು.